504(980) ಶ್ರೀ ಮಲ್ಲಿಕಾರ್ಜುನ ಸಿದ್ರಾಮಪ್ಪ ಖೂಬಾ (ಬಸವಕಲ್ಯಾಣ) ಮಾನ್ಯ ಉನ್ನತ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ,

ಅ) ರಾಜ್ಯದ ಉನ್ನತ ಶಿಕ್ಷಣ ಇಲಾಖೆಯ ವ್ಯಾಪ್ತಿಗೆ ಬರುವ ಕಾಲೇಜುಗಳ ಸಂಖ್ಯೆ ಎಷ್ಟು, ಈ ಕಾಲೇಜುಗಳಿಗೆ ಮಂಜೂರಾಗಿರುವ ಪ್ರಾಧ್ಯಾಪಕರು/ಉಪನ್ಯಾಸಕರುಗಳ ಸಂಖ್ಯೆ ಎಷ್ಟು,

ಆ) ಈ ಪೈಕಿ ಕಾರ್ಯನಿರ್ವಹಿಸುತ್ತಿರುವ ಪ್ರಾಧ್ಯಾಪಕರು/ ಉಪನ್ಯಾಸಕರುಗಳ ಸಂಖ್ಯೆ ಎಷ್ಟು, ಕೊರತೆ ಇರುವುದೆಷ್ಟು,

ಇ) ಈ ಪೈಕಿ ಎಷ್ಟು ಜನ ಪ್ರಾಧ್ಯಾಪಕರು/ ಉಪನ್ಯಾಸಕರುಗಳು ಇಲಾಖೆಯಿಂದ ಹೊರಗಡೆ ನಿಯೋಜನೆ/ ಅನ್ಯಕರ್ತವ್ಯದ ಆಧಾರದ ಮೇಲೆ ಕಾರ್ಯನಿರ್ವಹಿಸುತ್ತಿದ್ದಾರೆ (ಇವರುಗಳ ಹೆಸರು, ವೇತನ ಶ್ರೇಣಿ ಹಾಗೂ ಕಾರ್ಯನಿರ್ವಹಿಸುತ್ತಿರುವ ಇಲಾಖೆಯ ವಿವರಗಳನ್ನು ಒದಗಿಸುವುದು), ಇವರುಗಳು ಎಷ್ಟು ಅವಧಿಯಿಂದ ಇಲಾಖೆಯಿಂದ ಹೊರಗೆ ನಿಯೋಜನೆ/ಓಓಡಿ ಮೇಲೆ ಕೆಲಸ ನಿರ್ವಹಿಸುತ್ತಿದ್ದಾರೆ,

ಈ) ಇತ್ತೀಚೆಗೆ ಗೌರವಾನ್ವಿತ ಉಚ್ಚ ನ್ಯಾಯಾಲಯವು ಪ್ರಾಥಮಿಕ ಶಾಲೆಯ ಶಿಕ್ಷಕರೊಬ್ಬರ ನಿಯೋಜನೆಯನ್ನು ರದ್ದುಪಡಿಸಿರುವುದನ್ನು ಸರ್ಕಾರ ಗಮನಿಸಿದೆಯೇ,

ಉ) ಹಾಗಿದ್ದಲ್ಲಿ, ಉನ್ನತ ಶಿಕ್ಷಣ ಇಲಾಖೆಯ ವ್ಯಾಪ್ತಿಯಲ್ಲಿ ಬರುವ ಕಾಲೇಜುಗಳಲ್ಲಿಯೂ ಸಹ ಪ್ರಾಧ್ಯಾಪಕರು/ ಉಪನ್ಯಾಸಕರುಗಳ ಕೊರತೆ ಇರುವುದರಿಂದ, ಈಗಾಗಲೇ ನಿಯೋಜನೆ/ ಅನ್ಯಕರ್ತವ್ಯದ ಮೇಲೆ ಕೆಲಸ ಮಾಡುತ್ತಿರುವವರುಗಳನ್ನು ಇಲಾಖೆಗೆ ವಾಪಸ್ಸು ಕರೆಸಿಕೊಳ್ಳುವ ಬಗ್ಗೆ ಸರ್ಕಾರ ಯಾವ ಕ್ರಮ ಕೈಗೊಳ್ಳುವುದು?

ಶ್ರೀ ಡಿ ಎಚ್ ಶಂಕರಮೂರ್ತಿ (ಉನ್ನತ ಶಿಕ್ಷಣ ಸಚಿವರು)

ಅ) ಒಟ್ಟು ಕಾಲೇಜುಗಳ ಸಂಖ್ಯೆ
ಸರ್ಕಾರಿ 182, ಅನುದಾನಿತ 299
ಮಂಜೂರಾದ ಪ್ರಾಧ್ಯಾಪಕರು/ಉಪನ್ಯಾಸಕರ ಹುದ್ದೆಗಳು
ಸರ್ಕಾರಿ 3307, ಅನುದಾನಿತ 9654

ಆ) ಕಾರ್ಯನಿರ್ವಹಿಸುತ್ತಿರುವವರ ಸಂಖ್ಯೆ
ಸರ್ಕಾರಿ ಕಾಲೇಜುಗಳಲ್ಲಿ 2515
ಖಾಸಗಿ ಅನುದಾನಿತ ಕಾಲೇಜುಗಳಲ್ಲಿ 7546
ಕೊರತೆ ಇರುವ ಸಂಖ್ಯೆ
ಸರ್ಕಾರಿ ಕಾಲೇಜುಗಳಲ್ಲಿ 792
ಖಾಸಗಿ ಅನುದಾನಿತ ಕಾಲೇಜುಗಳಲ್ಲಿ 2108

ಇ) ನಿಯೋಜನೆ ಮೇಲೆ ಕೆಲಸ ಮಾಡುತ್ತಿರುವವರ ಸಂಖ್ಯೆ
ಸರ್ಕಾರಿ ಕಾಲೇಜುಗಳಿಂದ 19
ಖಾಸಗಿ ಅನುದಾನಿತ ಕಾಲೇಜುಗಳಿಂದ 13
(ವಿವರಗಳನ್ನು ಅನುಬಂಧದಲ್ಲಿ ನೀಡಲಾಗಿದೆ)

ಈ) ಹೌದು

ಉ) ಇಲಾಖೆಯಲ್ಲಿ ಉಪನ್ಯಾಸಕರ ಕೊರತೆ ಇದ್ದು, ಈ ರೀತಿ ನಿಯೋಜನೆ/ ಅನ್ಯಕರ್ತವ್ಯದ ಮೇಲೆ ಕಳುಹಿಸಿರುವುದರಿಂದ ವಿದ್ಯಾರ್ಥಿಗಳ ಪಾಠ ಪ್ರವಚನಗಳಿಗೆ ತೊಂದರೆ ಉಂಟಾಗುತ್ತಿದ್ದು, ವಿದ್ಯಾರ್ಥಿಗಳ ಶೈಕ್ಷಣಿಕ ಹಿತದೃಷ್ಟಿಯಿಂದ ಬೇರೆ ಬೇರೆ ಇಲಾಖೆಗೆ ನಿಯೋಜನೆ ಮಾಡದಿರಲು ವಿಶೇಷ ಪ್ರಕರಣಗಳನ್ನು ಹೊರತುಪಡಿಸಿ ಕ್ರಮ ಕೈಗೊಳ್ಳಲಾಗುವುದು

ಅನುಬಂಧ

ಕಾಲೇಜು ಶಿಕ್ಷಣ ಇಲಾಖೆಯಿಂದ ಬೇರೆ ಇಲಾಖೆಗಳಲ್ಲಿ ನಿಯೋಜನೆ ಓಓಡಿ ಮೇಲೆ ಕರ್ತವ್ಯ ನಿರ್ವಹಿಸುತ್ತಿರುವ ಪ್ರಾಂಶುಪಾಲರು ಮತ್ತು ಉಪನ್ಯಾಸಕರ ವಿವರ

ಸರ್ಕಾರಿ ಕಾಲೇಜಿನಿಂದ

ಕ್ರ. ಸಂ	ಹೆಸರು	ವೇತನ ಶ್ರೇಣಿ (ರೂ ಗಳಲ್ಲಿ)	ಕರ್ತವ್ಯ ನಿರ್ವಹಿಸುತ್ತಿರುವ ಇಲಾಖೆ	ಎಷ್ಟು ವರ್ಷಗಳಿಂದ
1	ಡಾ ಗುರುಮೂರ್ತಿ ಎಸ್ ಗ್ರೇಡ್–2, ಪ್ರಾಂಶುಪಾಲರು	16400–22400	ಗೌರವಾನ್ವಿತ ರಾಜ್ಯಪಾಲರ ಆಪ್ತ ಕಾರ್ಯದರ್ಶಿ, ರಾಜಭವನ, ಬೆಂಗಳೂರು	7 ವರ್ಷಗಳಿಂದ

ಕ್ರ ಸಂ	ಹೆಸರು	ವೇತನ ಶ್ರೇಣಿ (ರೂ ಗಳಲ್ಲಿ)	ಕರ್ತವ್ಯ ನಿರ್ವಹಿಸುತ್ತಿರುವ ಇಲಾಖೆ	ಎಷ್ಟು ವರ್ಷಗಳಿಂದ
2.	ಡಾ ನರಸಿಂಹಮೂರ್ತಿ ಆರ್ ಗ್ರೇಡ್–1, ಪ್ರಾಂಶುಪಾಲರು	12000–18300	ಮಾನ್ಯ ಇಂಧನ ಮತ್ತು ಲೋಕೋಪಯೋಗಿ ಸಚಿವರ ವಿಶೇಷ ಕರ್ತವ್ಯಾಧಿಕಾರಿ	11 ವರ್ಷಗಳಿಂದ
3	ಕೊಟ್ರಯ್ಯ ಎ ಎಂ ಆರ್, ಗ್ರೇಡ್–1, ಪ್ರಾಂಶುಪಾಲರು	12000–18300	ಸಿಬ್ಬಂದಿ ಆಧಿಕಾರಿ, ಕರ್ನಾಟಕ ಚಿತ್ರಕಲಾ ಪರಿಷತ್, ಬೆಂಗಳೂರು	6 ತಿಂಗಳುಗಳಿಂದ
4	ಡಾ ಶ್ರೀನಿವಾಸ ರೆಡ್ಡಿ, ಭೂಗರ್ಭಶಾಸ್ತ್ರ ಆಯ್ಕೆ ಶ್ರೇಣಿ ಉಪನ್ಯಾಸಕರು	12000–18300	ಜಲಾನಯನ ಅಭಿವೃದ್ಧಿ ಇಲಾಖೆ, ಬೆಂಗಳೂರು	3 ವರ್ಷಗಳಿಂದ
5	ಗೋವಿಂದಗೌಡ ಎಸ್ ಎನ್ ರಾಜ್ಯಶಾಸ್ತ್ರ ಆಯ್ಕೆ ಶ್ರೇಣಿ ಉಪನ್ಯಾಸಕರು	12000–18300	ಜಿಲ್ಲಾ ಸಮಾಜ ಕಲ್ಯಾಣಾಧಿಕಾರಿ, ಹಾಸನ	6 ವರ್ಷಗಳಿಂದ
6	ಶಂಕರಲಿಂಗೇಗೌಡ ಎಂ ಜಿ ಪ್ರಾಣಿಶಾಸ್ತ್ರ ಆಯ್ಕೆ ಶ್ರೇಣಿ ಉಪನ್ಯಾಸಕರು	12000–18300	ಜಿಲ್ಲಾ ಹಿಂದುಳಿದ ಮತ್ತು ಅಲ್ಪಸಂಖ್ಯಾತರ ಅಧಿಕಾರಿ, ಹಾಸನ	9 ವರ್ಷಗಳಿಂದ
7	ಚಿಂತಾಮಣಿ ಎಂ ಐ, ಕನ್ನಡ ಆಯ್ಕೆ ಶ್ರೇಣಿ ಉಪನ್ಯಾಸಕರು	12000–18300	ಉಪನ್ಯಾಸಕರು, ಕರ್ನಾಟಕ ರಾಜ್ಯ ಮಹಿಳಾ ವಿಶ್ವವಿದ್ಯಾಲಯ, ಬಿಜಾಪುರ	4 ವರ್ಷಗಳಿಂದ

ಕ್ರ ಸಂ	ಹೆಸರು	ವೇತನ ಶ್ರೇಣಿ (ರೂ ಗಳಲ್ಲಿ)	ಕರ್ತವ್ಯ ನಿರ್ವಹಿಸುತ್ತಿರುವ ಇಲಾಖೆ	ಎಷ್ಟು ವರ್ಷಗಳಿಂದ
8	ಡಾ ವಿಜಯಕುಮಾರಿ ಎಸ್ ಕರಿಕಲ್, ಕನ್ನಡ ಆಯ್ಕೆ ಶ್ರೇಣಿ ಉಪನ್ಯಾಸಕರು	12000–18300	ಉಪನ್ಯಾಸಕರು, ಕರ್ನಾಟಕ ರಾಜ್ಯ ಮಹಿಳಾ ವಿಶ್ವವಿದ್ಯಾಲಯ, ಬಿಜಾಪುರ	4 ವರ್ಷಗಳಿಂದ
9	ಮಲ್ಲಿಕಾರ್ಜುನಪ್ಪ ಜಿ ಎನ್ ವಾಣಿಜ್ಯಶಾಸ್ತ್ರ ಆಯ್ಕೆ ಶ್ರೇಣಿ ಉಪನ್ಯಾಸಕರು	12000–18300	ಆಡಳಿತಾಧಿಕಾರಿ, ಶ್ರೀ ಮುರುಘಮರ, ಚಿತ್ರದುರ್ಗ	9 ತಿಂಗಳುಗಳಿಂದ
10	ಗೋಪಾಲ್ ಕೆ ಎಸ್ ಭೌತಶಾಸ್ತ್ರ ಹಿರಿಯ ಶ್ರೇಣಿ ಉಪನ್ಯಾಸಕರು	10000–15200	ಕಾರ್ಯನಿರ್ವಹಣಾ ಅಧಿಕಾರಿ, ತಾಲ್ಲೂಕು ಪಂಚಾಯತ್ ಮಂಡ್ಯ	6 ತಿಂಗಳುಗಳಿಂದ
11	ಆಂಜನಪ್ಪ ಡಿ ಕನ್ನಡ ಹಿರಿಯ ಶ್ರೇಣಿ ಉಪನ್ಯಾಸಕರು	10000–15200	ಜಿಲ್ಲಾ ವ್ಯವಸ್ಥಾಪಕರು, ಡಾ ಬಿ ಆರ್ ಅಂಬೇಡ್ಕರ್ ಅಭಿವೃದ್ಧಿ ನಿಗಮ ನಿಯಮಿತ, ಬೆಂಗಳೂರು	1 ವರ್ಷ 3 ತಿಂಗಳುಗಳಿಂದ
12	ಡಾ ಫಾರೂಕ್ ಅಹಮದ್, ವಾಣಿಜ್ಯಶಾಸ್ತ್ರ ಹಿರಿಯ ಶ್ರೇಣಿ ಉಪನ್ಯಾಸಕರು	10000–15200	ಪ್ರಾಂಶುಪಾಲರು, ಜಿಲ್ಲಾ ತರಬೇತಿ ಸಂಸ್ಥೆ, ಬೀದರ್	1 ವರ್ಷ 6 ತಿಂಗಳುಗಳಿಂದ
13	ಡಾ ವಿಜಯ ಎಸ್ ಎಸ್ ಕನ್ನಡ ಹಿರಿಯ ಶ್ರೇಣಿ ಉಪನ್ಯಾಸಕರು	10000–15200	ಉಪನ್ಯಾಸಕರು, ಕರ್ನಾಟಕ ರಾಜ್ಯ ಮಹಿಳಾ	4 ವರ್ಷಗಳಿಂದ

ಕ್ರ. ಸಂ	ಹೆಸರು	ವೇತನ ಶ್ರೇಣಿ (ರೂ ಗಳಲ್ಲಿ)	ಕರ್ತವ್ಯ ನಿರ್ವಹಿಸುತ್ತಿರುವ ಇಲಾಖೆ	ಎಷ್ಟು ವರ್ಷಗಳಿಂದ
			ವಿಶ್ವವಿದ್ಯಾಲಯ, ಬಿಜಾಪುರ	
14	ಡಾ ವಿಜಯ ಬಿ ಕೋರಿಶೆಟ್ಟಿ, ಸಮಾಜಶಾಸ್ತ್ರ ಹಿರಿಯ ಶ್ರೇಣಿ ಉಪನ್ಯಾಸಕರು	10000–15200	ಉಪನ್ಯಾಸಕರು, ಕರ್ನಾಟಕ ರಾಜ್ಯ ಮಹಿಳಾ ವಿಶ್ವವಿದ್ಯಾಲಯ, ಬಿಜಾಪುರ	4 ವರ್ಷಗಳಿಂದ
15	ವಸಂತರಾಜ ಶೆಟ್ಟಿ, ಅರ್ಥಶಾಸ್ತ್ರ ಹಿರಿಯ ಶ್ರೇಣಿ ಉಪನ್ಯಾಸಕರು	10000–15200	ಕಾರ್ಯನಿರ್ವಹಣಾ ಅಧಿಕಾರಿ, ತಾಲ್ಲೂಕು ಪಂಚಾಯತ್ ಬೆಳ್ತಂಗಡಿ	6 ವರ್ಷಗಳಿಂದ
16	ಲಕ್ಷ್ಮೀಪತಿ ಸಿ ಜಿ ಸಮಾಜಶಾಸ್ತ್ರ ಹಿರಿಯ ಶ್ರೇಣಿ ಉಪನ್ಯಾಸಕರು	10000–15200	ಎನ್ ಎಸ್ ಎಸ್ ಕೋ–ಆರ್ಡಿನೇಟರ್, ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು	2 ತಿಂಗಳಿಂದ
17	ಡಾ ಶಿವಶರಣಪ್ಪ ಧಾಬಾ, ಅರ್ಥಶಾಸ್ತ್ರ ಹಿರಿಯ ಶ್ರೇಣಿ ಉಪನ್ಯಾಸಕರು	10000–15200	ಜಿಲ್ಲಾ ವಯಸ್ಕರ ಶಿಕ್ಷಣಾಧಿಕಾರಿ, ಗುಲ್ಬರ್ಗಾ	4 ತಿಂಗಳಿಂದ
18	ಚನ್ನನರಸಿಂಹಪ್ಪ, ರಾಜ್ಯಶಾಸ್ತ್ರ ಉಪನ್ಯಾಸಕರು	8000–13500	ಜಿಲ್ಲಾ ಹಿಂದುಳಿದ ವರ್ಗ ಮತ್ತು ಅಲ್ಪಸಂಖ್ಯಾತರ ಅಧಿಕಾರಿ, ರಾಯಚೂರು	6 ವರ್ಷಗಳಿಂದ

ಕ್ರ. ಸಂ	ಹೆಸರು	ವೇತನ ಶ್ರೇಣಿ (ರೂ ಗಳಲ್ಲಿ)	ಕರ್ತವ್ಯ ನಿರ್ವಹಿಸುತ್ತಿರುವ ಇಲಾಖೆ	ಎಷ್ಟು ವರ್ಷಗಳಿಂದ
19	ಜಯರಾಂ, ಎನ್ ಹೆಚ್ ದೈಹಿಕ ಶಿಕ್ಷಣ ಬೋಧಕರು	8000–13500	ಆಪ್ತ ಸಹಾಯಕರು, ಮಾನ್ಯ ಜಲಸಂಪನ್ಮೂಲ ಸಚಿವರ ಕಛೇರಿ, ಬೆಂಗಳೂರು	6 ತಿಂಗಳುಗಳಿಂದ
	ಖಾಸಗಿ ಕಾಲೇಜಿನಿಂದ			
1	ಡಾ ಎಂ ಡಿ ದಿಲ್‌ಶಾದ್, ಗ್ರೇಡ್–1, ಪ್ರಾಂಶುಪಾಲರು	12000–18300	ಮಹಿಳಾ ವಿಶ್ವವಿದ್ಯಾಲಯ, ಬಿಜಾಪುರ	3 ವರ್ಷ 6 ತಿಂಗಳುಗಳಿಂದ
2	ಕೆ ಎಸ್ ಪ್ರಸಾದ್, ರಸಾಯನಶಾಸ್ತ್ರ ಆಯ್ಕೆ ಶ್ರೇಣಿ ಉಪನ್ಯಾಸಕರು	12000–18300	ಸಹಾಯಕ ಕುಲಸಚಿವರು, ರಾಜೀವ್‌ಗಾಂಧಿ ವಿಶ್ವವಿದ್ಯಾಲಯ, ಬೆಂಗಳೂರು	
3	ಪಾಟಿ ಎ ಸೆಬಾಸ್ಟಿಯನ್, ಇಂಗ್ಲೀಷ್ ಆಯ್ಕೆ ಶ್ರೇಣಿ ಉಪನ್ಯಾಸಕರು	12000–18300	ಪ್ರಾಂಶುಪಾಲರು, ಕ್ರೈಸ್ಟ್ ಜಯಂತಿ ಕಾಲೇಜ್ ಆಫ್ ಮ್ಯಾನೇಜ್‌ಮೆಂಟ್ ಅಂಡ್ ಟೆಕ್ನಾಲಜಿ ಕೆ	1 ವರ್ಷ
4	ಡಾ ಸಿದ್ದಪ್ಪ, ಅರ್ಥಶಾಸ್ತ್ರದ ಆಯ್ಕೆ ಶ್ರೇಣಿ ಉಪನ್ಯಾಸಕರು	12000–18300	ತುಮಕೂರು ವಿಶ್ವವಿದ್ಯಾಲಯ ತುಮಕೂರು	6 ತಿಂಗಳುಗಳಿಂದ
5	ಎಂ ಎನ್ ಐ ಮುಲ್ಲಾ ಆಯ್ಕೆ ಶ್ರೇಣಿ ಉಪನ್ಯಾಸಕರು	12000–18300	ಪ್ರಭಾರ ಪ್ರಾದೇಶಿಕ ನಿರ್ದೇಶಕರು, ಮೌಲಾನಾ ಆಜಾದ್	1 ವರ್ಷ 6 ತಿಂಗಳುಗಳಿಂದ

ಕ್ರ ಸಂ	ಹೆಸರು	ವೇತನ ಶ್ರೇಣಿ (ರೂ ಗಳಲ್ಲಿ)	ಕರ್ತವ್ಯ ನಿರ್ವಹಿಸುತ್ತಿರುವ ಇಲಾಖೆ	ಎಷ್ಟು ವರ್ಷಗಳಿಂದ
			ರಾಷ್ಟ್ರೀಯ ವಿಶ್ವವಿದ್ಯಾಲಯ, ಮುಂಬೈ	
6	ಜೆ ಎಂ ತಿಪ್ಪೇಸ್ವಾಮಿ, ಅರ್ಥಶಾಸ್ತ್ರ ಹಿರಿಯ ಶ್ರೇಣಿ ಉಪನ್ಯಾಸಕರು	10000–15200	ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರ ವಿಶೇಷಾಧಿಕಾರಿ	3 ವರ್ಷ
7	ಕನ್ನಡ ಉಪನ್ಯಾಸಕರು, ಎಂ ಜಿ ವಿ ಸಿ ಕಲಾ ಮತ್ತು	8000–13500	ಮಹಿಳಾ ವಿಶ್ವವಿದ್ಯಾಲಯ, ಬಿಜಾಪುರ	3 ವರ್ಷ 6 ತಿಂಗಳುಗಳಿಂದ
8	ಡಾ ಸಿ ಡಿ ವೆಂಕಟೇಶ, ಸಮಾಜಶಾಸ್ತ್ರ ಉಪನ್ಯಾಸಕರು	8000–13500	ಮಹಿಳಾ ವಿಶ್ವವಿದ್ಯಾಲಯ, ಬಿಜಾಪುರ	3 ವರ್ಷ 6 ತಿಂಗಳುಗಳಿಂದ
9	ಡಾ ಎಸ್ ಎಸ್ ಫಿರ್‌ಜಾದೆ, ಅರ್ಥಶಾಸ್ತ್ರ ಉಪನ್ಯಾಸಕರು	8000–13500	ಮಹಿಳಾ ವಿಶ್ವವಿದ್ಯಾಲಯ, ಬಿಜಾಪುರ	3 ವರ್ಷ 6 ತಿಂಗಳುಗಳಿಂದ
10	ಅಹಮತುಲ್ಲಾ ಹಕ್ ಎಸ್ ಉರ್ದು ಆಯ್ಕೆ ಶ್ರೇಣಿ ಉಪನ್ಯಾಸಕರು	12000–18300	ರಿಜಿಸ್ಟ್ರಾರ್, ಕರ್ನಾಟಕ ಉರ್ದು ಅಕಾಡೆಮಿ, ಬೆಂಗಳೂರು	4 ತಿಂಗಳುಗಳಿಂದ
11	ಅಹಮದ್ ಆರ್ ಇತಿಹಾಸ ಆಯ್ಕೆ ಶ್ರೇಣಿ ಉಪನ್ಯಾಸಕರು	12000–18300	ನಿರ್ದೇಶಕರು, ಮೌಲಾನ ಅಜಾದ್ ನ್ಯಾಷನಲ್ ಉರ್ದು ವಿಶ್ವವಿದ್ಯಾಲಯ, ಹೈದರಾಬಾದ್	2 ವರ್ಷ

ಕ್ರ ಸಂ	ಹೆಸರು	ವೇತನ ಶ್ರೇಣಿ (ರೂ ಗಳಲ್ಲಿ)	ಕರ್ತವ್ಯ ನಿರ್ವಹಿಸುತ್ತಿರುವ ಇಲಾಖೆ	ಎಷ್ಟು ವರ್ಷಗಳಿಂದ
12	ಮಂಜುನಾಥ್, ಎಸ್ ಪಿ ವಾಣಿಜ್ಯಶಾಸ್ತ್ರ ಹಿರಿಯ ಶ್ರೇಣಿ ಉಪನ್ಯಾಸಕರು	10000–15300	ಜೆ ಎಸ್ ಎಸ್ ವಿದ್ಯಾಪೀಠ, ಮೈಸೂರು	6 ತಿಂಗಳುಗಳಿಂದ
13	ಶಿವಕುಮಾರಸ್ವಾಮಿ ಎಸ್ ರಾಜ್ಯಶಾಸ್ತ್ರ ಆಯ್ಕೆ ಶ್ರೇಣಿ ಉಪನ್ಯಾಸಕರು	12000–18300	ಜೆ ಎಸ್ ಎಸ್ ವಿದ್ಯಾಪೀಠ, ಮೈಸೂರು	6 ತಿಂಗಳುಗಳಿಂದ

505(931) ಶ್ರೀ ಮಲ್ಲಿಕಾರ್ಜುನ ಸಿದ್ರಾಮಪ್ಪ ಖೂಬಾ (ಬಸವಕಲ್ಯಾಣ) ಮಾನ್ಯ ವಸತಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ,

ಅ) ಬೆಂಗಳೂರು ನಗರ ಮತ್ತು ಗ್ರಾಮಾಂತರ ಜಿಲ್ಲೆಯ ಯಾವ ಯಾವ ಸ್ಥಳಗಳಲ್ಲಿ ಕರ್ನಾಟಕ ಗೃಹ ಮಂಡಳಿಯು ನಿವೇಶನ/ಮನೆಗಳು/ ಫ್ಲಾಟ್‌ಗಳಿಗಾಗಿ ಅರ್ಜಿಗಳನ್ನು ಯಾವಾಗ ಕರೆಯಲಾಗಿದೆ,

ಆ) ಇದಕ್ಕಾಗಿ ಎಷ್ಟು ಅರ್ಜಿಗಳು ಬಂದಿವೆ, ಅರ್ಜಿಗಳ ಜೊತೆಯಲ್ಲಿ ಬಂದಿರುವ ರೇವಣಿ ಹಣವೆಷ್ಟು, (ಪ್ರತಿ ಸ್ಥಳದ ಬಗ್ಗೆ ವಿವರಗಳನ್ನು ಒದಗಿಸುವುದು)

ಇ) ಈ ಸಂಬಂಧವಾಗಿ ಮಂಜೂರಾತಿ ಪ್ರಕ್ರಿಯೆ ಯಾವ ಹಂತದಲ್ಲಿದೆ,

ಈ) ಎಷ್ಟು ಸಮಯದಲ್ಲಿ ಈ ಪ್ರಕ್ರಿಯೆಯನ್ನು ಪೂರ್ಣಗೊಳಿಸಲಾಗುವುದು, ಯಾವ ಯಾವ ಕೋಟಾದಲ್ಲಿ ಎಷ್ಟೆಷ್ಟು ಪ್ರಮಾಣದಲ್ಲಿ ಇವುಗಳನ್ನು ಹಂಚಿಕೆ ಮಾಡಲಾಗುವುದು, ಇದಕ್ಕಾಗಿ ಇಲ್ಲಿಯವರೆವಿಗೆ ವಿವಿಧ ಗಣ್ಯರಿಂದ ಬಂದಿರುವ ಶಿಫಾರಸ್ಸುಗಳ ವಿವರಗಳೇನು,

ಉ) ಮಂಜೂರಾತಿ ಪ್ರಕ್ರಿಯೆ ತಡವಾಗುತ್ತಿರಲು ಕಾರಣಗಳೇನು?

ಶ್ರೀ ಡಿ ಟಿ ಜಯಕುಮಾರ್ (ವಸತಿ ಸಚಿವರು)

ಅ) ಎ) ಬೆಂಗಳೂರು ನಗರ ಜಿಲ್ಲೆಯ ಸೂರ್ಯನಗರ ಮತ್ತು ಬಂಡೇಮರ ಯೋಜನೆಗಳಿಗೆ ದಿನಾಂಕ 3 9 2006ರಂದು ನಿವೇಶನ/ಮನೆಗಳು/ ಫ್ಲಾಟ್‌ಗಳ ಹಂಚಿಕೆಗಾಗಿ ಅರ್ಜಿಗಳನ್ನು ಕರೆಯಲಾಗಿದೆ